**ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಕೊಳ್ಳೇಗಾಲ.**

**ದಿನಾಂಕಃ 12ನೇ ಸೆಪ್ಟೆಂಬರ್ 2025**

ಉಪಸ್ಥಿತರು

ಶ್ರೀಮತಿ. ಕಾವ್ಯಶ್ರೀ ಎಂ.
ಬಿ.ಎ., ಎಲ್.ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.
ಕೊಳ್ಳೇಗಾಲ.

**ಸಿ.ಸಿ. ಸಂಖ್ಯೆ.782/2016**

**ಪಿರ್ಯಾದುದಾರರು** : ಕೊಳ್ಳೇಗಾಲ ಗ್ರಾಮಾಂತರ ಪೋಲಿಸ್ ಠಾಣೆ

**ವಿರುದ್ಧ/-**

**ಆರೋಪಿತರು** : 1. ಪ್ರಭುಸ್ವಾಮಿ ಬಿನ್ ಲೇಟ್ ಮಹದೇವಪ್ಪ,
ವಯಸ್ಸುಃ 55 ವರ್ಷ

2. ಸಾಕಮ್ಮ ಕೋಂ ಪ್ರಭುಸ್ವಾಮಿ,
ವಯಸ್ಸುಃ 43 ವರ್ಷ

ಇಬ್ಬರ ವಾಸಃ ಮೇಗಲಬೀದಿ,
ಮಧುವನಹಳ್ಳಿ ಗ್ರಾಮ, ಕೊಳ್ಳೇಗಾಲ ತಾಲ್ಲೂಕು.

**(ಪ್ರತಿನಿಧಿಸುವವರುಃ ಶ್ರೀ.ಎಸ್.ಎಸ್.ಬಿ., ವಕೀಲರು)**

**-:ಆದೇಶ:-**

ಸಹಾಯಕ ಸರ್ಕಾರಿ ಅಭಿಯೋಜಕರು ದಂಡ ಪ್ರಕ್ರಿಯಾ ಸಂಹಿತೆ ಕಲಂ 319 ರಡಿಯಲ್ಲಿ ಅರ್ಜಿ ಸಲ್ಲಿಸಿ, ಸದರಿ ಅರ್ಜಿಯಲ್ಲಿ ಪ್ರಸ್ತಾಪಿಸಲಾಗಿರುವ ಆರೋಪಿತನನ್ನು ಹೆಚ್ಚುವರಿ ಆರೋಪಿತನನ್ನಾಗಿ ಪಕ್ರರಣಕ್ಕೆ ಸೇರ್ಪಡೆ ಮಾಡಬೇಕಾಗಿ ಕೋರಿ ಈ ಮೇಲ್ಕಂಡ ಅರ್ಜಿಯನ್ನು ಸಲ್ಲಿಸಿರುತ್ತಾರೆ.

**2.** ಈ ನ್ಯಾಯಾಲಯವು ಅಭಿಯೋಜನೆಯು ಅರ್ಜಿಯನ್ನು ದಾಖಲಿಸಿ, ಪಿರ್ಯಾದಿ ಪೋಲಿಸರು ಆರೋಪಿತರುಗಳ ವಿರುದ್ದ ದಂಡ ಸಂಹಿತೆ ಕಲ್ಂ **341, 323, 504, 354(B), 511** ಸಹವಾಚಕ ಕಲಂ **34**ರಡಿಯಲ್ಲಿ ಪ್ರಕರಣವನ್ನು ದಾಖಲುಮಾಡಿರುತ್ತಾರೆ. ಸದರಿ ಪ್ರಕರಣದಲ್ಲಿ ದೋಷರೋಪಣಾಪತ್ರ ಸಲ್ಲಿಸುವ ಸಮಯದಲ್ಲಿ ಸತೀಶ್ ಕುಮಾರ್ ರವರನ್ನು ಕೈ ಬಿಟ್ಟಿರುತ್ತಾರೆ.

ಮುಂದುವರೆದು, ಚಾಸಾ-1/ ಪ್ರಾಸ-1 ಪಿರ್ಯಾದಿ ಮತ್ತು ಗಾಯಾಳು ಸಾಕ್ಷಿಯಾದ ಜ್ಯೋತ್ಯಿರವರು " ಪ್ರಭುಸ್ವಾಮಿ ಮಗ ಸತೀಶ್ ಎಂಬುವರು ಇವರ ಜೊತೆ ಸೇರಿಕೊಂಡು ಗಲಾಟೆ ಮಾಡಿ, ಅವಾಚ್ಯ ಶಬ್ದಗಳಿಂದ ನಿಂದಿಸಿ ಸೀರೆಯನ್ನು ಹಿಡಿದು ಎಳೆದಾಡಿ ಅವಮಾನ ಪಡಿಸಿರುತ್ತಾರೆ" ಎಂಬುದಾಗಿ ತಿಳಿಸಿರುತ್ತಾರೆ. ಅದರಂತೆ, ಪ್ರಸ್ತಾಪಿಸಲಾದ ಆರೋಪಿಯು ಈ ಪ್ರಕರಣದಲ್ಲಿ ಭಾಗಿಯಾಗಿದ್ದು, ಅವರಿಗೆ ಸಮನ್ಸ್ ಮಾಡಿ ವಿಚಾರಣೆಗೆ ಒಳಪಡಿಸಿಕೊಳ್ಳುವಂತೆ ಕೋರಿಕೊಂಡಿತ್ತಾರೆ.

ಅರ್ಜಿಯ ಆಧಾರ ಮೇರೆಗೆ ನ್ಯಾಯಾಲಯವು ಪ್ರಸ್ತಾಪಿಸಲ್ಪಟ್ಟ ಆರೋಪಿತನಿಗೆ ನೋಟಿಸ್ ಮಾಡಿದ್ದು,ಎದುರುದಾರರು ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ತಕರಾರು ಸಲ್ಲಿಸಿರುತ್ತಾರೆ. ಎದುರುದಾರರ ತಮ್ಮ ತಕರಾರಿನಲ್ಲಿ, ಪ್ರಾಸ-1 ರವರು ಪ್ರಭುಸ್ವಾಮಿರವರ ಮಗ ಸತೀಶ್ ಆರೋಪಿತರ ಜೊತೆ ಸೇರಿಕೊಂಡು ಗಲಾಟೆ ಮಾಡಿರುತ್ತಾರೆ ಎಂಬುದಾಗಿ ಹೇಳಿರುವುದು ಸರಿಯಷ್ಟೇ, ಆದರೆ, ತನಿಖಾಧಿಕಾರಿಗಳೌ ಅಂತಿಮ ವರದಿಯನ್ನು ಸಲ್ಲಿಸುವ ಸಮಯದಲ್ಲಿ ಎದುರುದಾರರನ್ನು ಕೈ ಬಿಡಲಾಗಿರುತದೆ. ಅದರಂತೆ, ಎದುರುದಾರರನ್ನು ದುರುದ್ದೇಶದಿಂದ ಸತೀಶ ರವರ ವಿರುದ್ದ ಸಾಕ್ಷ್ಯವನ್ನು ನುಡಿದಿರುತ್ತಾರೆ.ಆದ್ದರಿಂದ, ಅಭಿಯೋಜನೆಯು ಸಲ್ಲಿಸಿರುವ ಅರ್ಜಿಯನ್ನು ವಜಾಗೊಳಿಸುವಂತೆ ಕೋರಿಕೊಳ್ಳುತ್ತಾರೆ.

**3.** ಉಭಯ ಪಕ್ಷಗಾರರ ವಾದ ವಿವಾದಗಳನ್ನು ಆಲಿಸಿದ ನಂತರ ಹಾಗೂ ಕಡತದಲ್ಲಿರುವ ದಾಖಲಾತಿಗಳನ್ನು ಪರಿಶೀಲಿಸಿದ ನಂತರ ಈ ಕೆಳಕಂಡ ಪ್ರಶ್ನೆ ಉದ್ಬವವಾಗಿರುತ್ತದೆ.

ಅಂಶ-1: ಅಭಿಯೋಜನೆಯು ಸಲ್ಲಿಸಿರುವ ದಂಡ ಪ್ರಕ್ರಿಯಾ ಸಂಹಿತೆ ಕಲಂ 319 ರಡಿಯಲ್ಲಿನ ಅರ್ಜಿಯನ್ನು ಮೇಲ್ನೋಟಕ್ಕೆ ರುಜುವಾತು ಪಡಿಸುವರೇ ?

ಅಂಶ-2: ಯಾವ ಆದೇಶ ?

4. ಈ ಕೆಳಕಂಡಂತೆ ಚರ್ಚಿಸಿದ ಕಾರಣಗಳಿಗಾಗಿ, ಈ ಕೆಳಕಂಡತೆ ಪ್ರಶ್ನೆಗಳಿಗೆ ಉತ್ತರಿಸುತ್ತೇನೆ.

ಅಂಶ-1 : ಸಕರಾತ್ಮಕವಾಗಿ

ಅಂಶ-2 : ಅಂತಿಮ ಆದೇಶದಂತೆ, ಈ ಕೆಳಕಂಡಂತೆ ಮಾಡಲಾಗುವ ಆದೇಶ,

-: **ಕಾರಣಗಳು** :-

5.**ಅಂಶ-1**: ಪಿರ್ಯಾದಿ ಪೋಲಿಸರು ಆರೋಪಿತರುಗಳ ವಿರುದ್ದ ಭಾರತೀಯ ದಂಡ ಸಂಹಿತೆ ಕಲಂ.341, 323, 504, 354(ಬಿ), 511 ಸಹವಾಚಕ 34 ರಡಿಯಲ್ಲಿ ಪ್ರಕರಣವನ್ನು ದಾಖಲಿಸಿರುತ್ತಾರೆ.

6. ಅಭಿಯೋಜನೆಯು ತನ್ನ ತಕರಾರಿನಲ್ಲಿ ಈ ಪ್ರಕರಣದಲ್ಲಿ ದೂರುದಾರರು ಮತ್ತು ಗಾಯಾಳು ಸಾಕ್ಷಿಯಾದ ಚಾಸಾ.1/ಪ್ರಾಸಾ-1 ಪಿರ್ಯಾದಿ ಮತ್ತು ಗಾಯಾಳುವಾಗಿರುವ ಜ್ಯೋತಿ ಪಿರ್ಯಾದಿನಲ್ಲಿ ಪ್ರಭಸ್ವಾಮಿ ಮಗ ಸತೀಶ ಎಂಬುವವನ್ನು ಇವರ ಜೊತೆ ಸೇರಿಕೊಂಡು ಗಲಾಟೆ ಮಾಡಿ ಅವಾಚ್ಯ ಶಬ್ಧಗಳಿಂದ ಬೈದು ನನ್ನ ಸೀರೆಯನ್ನು ಹಿಡಿದು ಎಳೆದಾಡಿ ಅವಮಾನ ಪಡಿಸಿರುವುದಾಗಿ ತಿಳಿಸಿರುತ್ತಾರೆ. ಹಾಗೂ ತನ್ನ ಮುಖ್ಯ ವಿಚಾರಣೆಯಲ್ಲಿಯು ಆರೋಪಿತನಾದ ಸತೀಶನ ವಿರುದ್ದ ಸಾಕ್ಷಿಯನ್ನು ನುಡಿದಿರುತ್ತಾರೆ. ಆದರೆ, ಈ ಪ್ರಕರಣದಲ್ಲಿ ತನಿಖಾಧಿಕಾರಿಯು ಸಮಗ್ರವಾಗಿ ತನಿಖೆ ನಡೆಸಿ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ಅಂತಿಮ ವರದಿಯಲ್ಲಿ ಸತೀಶ್ ರವರ ವಿರುದ್ದ ಯಾವುದೇ ಅಪರಾಧವು ಸಾಬೀತಾಗದೆ ಇರುವುದರಿಂದ ಅಂತಿಮ ವರದಿಯಲ್ಲಿ ಕೈ ಬಿಟ್ಟಿರುವುದು ಕಂಡು ಬಂದಿರುತ್ತದೆ. ಆದರೆ ಪ್ರಾಸಾ.1 ರವರ ಸಾಕ್ಷ್ಯದಂತೆ ಸದರಿ ವ್ಯಕ್ತಿಯು ಸಹ ಕೃತ್ಯದಲ್ಲಿ ಭಾಗಿಯಾಗಿರುವುದು ಕಂಡು ಬರುತ್ತದೆ. ಆದ್ದರಿಂದ, ಸದರಿ ವ್ಯಕ್ತಿಯನ್ನು ಸಹ ಹೆಚ್ಚುವರಿ ಆರೋಪಿತನನ್ನಾಗಿ ಸೇರ್ಪಡೆ ಮಾಡಬೇಕಾಗಿ ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಆದರೆ, ಎದುರುದಾರರ ವಿರುದ್ದ ಪ್ರಾಸ-1 ರವರು ಉದ್ದೇಶ ಪೂರ್ವಕವಾಗಿ ಆರೋಪಿಸಿತ್ತಾರೆ ಆದಕಾರಣ, ಅರ್ಜಿಯನ್ನು ಪುರಸ್ಕರಿಸುವಂತೆ ಕೋರಿಕೊಂಡಿರುತ್ತಾರೆ.

7. ಅಭಿಯೋಜನೆಯು ಮೇಲ್ಕಂಡ ಅರ್ಜಿಯನ್ನು ದಾಖಲು ಮಾಡಿ, ಪ್ರಸ್ತಾಪಿತ ಆರೋಪಿಯು ಸಹ ಕೃತ್ಯದಲ್ಲಿ ಭಾಗಿಯಾಗಿರುವುದಾಗಿ ಚಾಸಾ-1ರವರ ಸಾಕ್ಷ್ಯದಿಂದ ಕಂಡು ಬರುತ್ತಿದೆ. ಹಾಗಾಗಿ ಸದರಿ ಆರೋಪಿಯನ್ನು ಸಹ ಪ್ರಕರಣದಲ್ಲಿ ಸೇರ್ಪಡೆ ಮಾಡುವುದು ಅತ್ಯವಾಶ್ಯಕವಾಗಿರುತ್ತದೆ. ಆದ್ದರಿಂದ, ಸದರಿ ಪ್ರಸ್ತಾಪಿತ ಆರೋಪಿಗೆ ಸಮನ್ಸ್ ಜಾರಿ ಮಾಡಿ, ದೋಷರೋಪಣೆಯನ್ನು ರಚಿಸುವುದು ಅತ್ಯವಶ್ಯಕವಾಗಿರುತ್ತದೆ. ಆದ್ದರಿಂದ, ಅಭಿಯೋಜನೆಯವರು ಸಲ್ಲಿಸಿರುವ ಅರ್ಜಿಯನ್ನು ಪುರಸ್ಕರಿಸಬೇಕಾಗಿ ಕೋರಿಕೊಳ್ಳುತ್ತಾರೆ. ಪ್ರಸ್ತಾಪಿತ ಆರೋಪಿತರು ತಮ್ಮ ತಕರಾರನ್ನು ಸಲ್ಲಿಸಿ, ಈ ಪ್ರಕರಣದಲ್ಲಿ, ಪಿರ್ಯಾದುದಾರರಾದ ಚಾಸಾ-1 ರವರ ದೂರಿನ ಅನ್ವಯ ಪ್ರಸ್ತುತ ಈ ಪ್ರಕರಣದಲ್ಲಿನ ಆರೋಪಿತರು ಹಾಗೂ ಪ್ರಸ್ತಾಪಿತ ಆರೋಪಿ ವಿರುದ್ಧ ಪ್ರಕರಣವನ್ನು ದಾಖಲು ಮಾಡಲಾಗಿರುತ್ತದೆ. ಆದರೆ, ತನಿಖಾಧಿಕಾರಿಯು ತನ್ನ ತನಿಖೆಯ ಸಮಯದಲ್ಲಿ ಪಿರ್ಯಾದುದಾರರು ನೀಡಿದ ಮರು ಹೇಳಿಕೆಯ ಮೇರೆಗೆ ಪ್ರಸ್ತಾಪಿತ ಆರೋಪಿತರ ವಿರುದ್ಧ ಪ್ರಕರಣವನ್ನು ದಾಖಲು ಮಾಡಿರುವುದಿಲ್ಲ. ಆದಕಾರಣ, ಅರ್ಜಿಯನ್ನು ತಿರಸ್ಕರಿಸುವಂತೆ ಕೋರಿಕೊಂಡಿರುತ್ತಾರೆ.

8. ನ್ಯಾಯಾಲಯದ ಸಮಕ್ಷಮ ಇರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ ಚಾಸಾ.1 ರವರು ದಿನಾಂಕಃ 25.01.2016 ರಂದು ಪೋಲಿಸ್ ಠಾಣೆಗೆ ಹಾಜರಾಗಿ ತಮ್ಮ ಪಿರ್ಯಾದನ್ನು ಸಲ್ಲಿಸಿರುತ್ತಾರೆ. ಚಾಸಾ-1/ ಪ್ರಾಸ-1 ಪಿರ್ಯಾದಿ ಮತ್ತು ಗಾಯಾಳು ಸಾಕ್ಷಿಯಾದ ಜೋತ್ಯಿರವರು " ಪ್ರಭುಸ್ವಾಮಿ ಮಗ ಸತೀಶ್ ಎಂಬುವರು ಇವರ ಜೊತೆ ಸೇರಿಕೊಂಡು ಗಲಾಟೆ ಮಾಡಿ, ಅವಾಚ್ಯ ಶಬ್ದಗಳಿಂದ ನಿಂದಿಸಿ ಸೀರೆಯನ್ನು ಹಿಡಿದು ಎಳೆದಾಡಿ ಅವಮಾನ ಪಡಿಸಿರುತ್ತಾರೆ" ಎಂಬುದಾಗಿ ತಿಳಿಸಿರುತ್ತಾರೆ. ಮುಂದುವರೆದು, ಚಾಸಾ-1ರವರು ದಾಖಲು ಮಾಡಿರುವ ದೂರಿನಲ್ಲಿ, ಹಾಗೂ ಪ್ರಥಮ ವರ್ತಮಾನ ವರದಿಯಲ್ಲಿ ಪ್ರಭುಸ್ವಾಮಿ ಮಗ ಸತೀಶ್ ಎಂಬುವರು ಸಹ ಕೃತ್ಯದಲ್ಲಿ ಭಾಗಿಯಾಗಿದ್ದರು ಎಂಬ ಬಗ್ಗೆ ಸಂಗತಿಯನ್ನು ನಿರೂಪಿಸಿರುವುದು ಕಂಡು ಬರುತ್ತಿದೆ. ಸದರಿ ಚಾಸಾ-1ರವರು ನೀಡಿದ ದೂರು, ಪ್ರಥಮ ವರ್ತಮಾನ ವರದಿ, ಹಾಗೂ ಚಾಸಾ-1ರವರ ಮುಖ್ಯ ವಿಚಾರಣೆಯಲ್ಲಿ ಪ್ರಸ್ತಾಪಿತ ಆರೋಪಿಯು ಕೃತ್ಯದಲ್ಲಿ ಭಾಗಿರುತ್ತಾರೆ ಎಂಬುದಾಗಿ ಈ ಹಂತದಲ್ಲಿ ಮೇಲ್ನೋಟಕ್ಕೆ ಕಂಡು ಬರುತ್ತಿದೆ.

9. ಚಾಸಾ.1 ರವರು ಈ ಪ್ರಕರಣದಲ್ಲಿ ದೂರು ನೀಡುವ ಸಮಯದಲ್ಲಿ ಪ್ರಸ್ತಾಪಿತ ಆರೋಪಿ ಸಹ ಕೃತ್ಯದಲ್ಲಿ ಭಾಗಿಯಾಗಿರುವ ಬಗ್ಗೆ ತಿಳಿಸಿದ್ದರೂ, ಸಹ ತನಿಖಾಧಿಕಾರಿಯು ತನ್ನ ತನಿಖೆಯನ್ನು ನಡೆಸುವ ಸಮಯದಲ್ಲಿ, ಪ್ರಸ್ತಾಪಿತ ಆರೋಪಿಯನ್ನು ಕೈಬಿಟ್ಟಿರುವುದಾಗಿ ತಿಳಿಸಿರುತ್ತಾರೆ. ಆದರೆ, ಚಾಸಾ-1ರವರು ತಮ್ಮ ವಿಚಾರಣೆಯಲ್ಲಿ ಸದರಿ ಮರು ಹೇಳಿಕೆಯನ್ನು ತಾನು ನೀಡಿರುವುದಾಗಿ ಯಾವುದೇ ಸಂಗತಿಯನ್ನು ನಿರೂಪಿಸಿರುವುದಿಲ್ಲ. ಈ ಹಂತದಲ್ಲಿ ನ್ಯಾಯಾಲಯದ ಸಮಕ್ಷಮ ಇರುವ ಸಾಕ್ಷಾಧಾರಗಳಂತೆ ಪ್ರಸ್ತಾಪಿತ ಆರೋಪಿಯು ಆ ದಿನ ಕೃತ್ಯದಲ್ಲಿ ಭಾಗಿಯಾಗಿದ್ದರು ಎಂಬುದನ್ನು ಪುಷ್ಠೀಕರಿಸುವಂತೆ, ಹಾಗೂ ಆರೋಪಿತರ ವಿರುದ್ದ ದೋಷರೋಪಣೆಯನ್ನು ರಚಿಸಲು ಅವಶ್ಯಕವಾದ ಸಂಗತಿಗಳು ಕಂಡು ಬಂದಿರುತ್ತದೆ. ಈ ಹಂತದಲ್ಲಿ ಅರ್ಜಿಯಲ್ಲಿ ಪ್ರಸ್ತಾಪಿಸಲ್ಪಟ್ಟ ಆರೋಪಿಯು ಕೃತ್ಯದಲ್ಲಿ ಭಾಗಿಯಾಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಹಾಗೂ ಸದರಿ ಪ್ರಸ್ತಾಪಿಸಿತ ಆರೋಪಿಯ ವಿರುದ್ದ ದೋಷಾರೋಪಣೆಯನ್ನು ರಚಿಸಲು ಸಾಕಷ್ಟು ಸಂಗತಿಗಳು ಈ ಹಂತದಲ್ಲಿ ಲಭ್ಯವಿರುವ ಕಾರಣ ಆದ ಕಾರಣ ಅಂಶ1 ನ್ನು ಸಕರಾತ್ಮಕವಾಗಿ ಉತ್ತರಿಸಲಾಗಿದೆ.

10. ಅಂಶ-2 : ಈ ಮೇಲ್ಕಂಡಂತೆ ಚರ್ಚಿಸಿದ ಎಲ್ಲಾ ಕಾರಣಗಳಿಗಾಗಿ, ಈ ಕೆಳಕಂಡಂತೆ ಮಾಡುವ ಆದೇಶ :-

**- ಆದೇಶ -**

ಅಭಿಯೋಜನೆಯು ಸಲ್ಲಿಸಿರುವ ದಂಡ ಪ್ರಕ್ರಿಯಾ ಸಂಹಿತೆ ಕಲಂ 319 ರಡಿಯಲ್ಲಿನ ಅರ್ಜಿಯನ್ನು ಈ ಮೂಲಕ ಪುರಸ್ಕರಿಸಲಾಗಿದೆ.

ಸದರಿ ಆದೇಶದಂತೆ ಪ್ರಸ್ತಾಪಿತ ಆರೋಪಿ ಈ ಪ್ರಕರಣದ 3ನೇ ಆರೋಪಿ ಎಂದು ಪರಿಗಣಿಸಲಾಗಿದೆ. ಹಾಗೂ ಸದರಿ 3ನೇ ಆರೋಪಿಯಾದ ಸತೀಶ್ ಬಿನ್ ಪ್ರಭುಸ್ವಾಮಿ ರವರಿಗೆ ನ್ಯಾಯಾಲಯದಿಂದ ಸಮನ್ಸ್ ಜಾರಿಮಾಡುವಂತೆ ಆದೇಶಿಸಲಾಗಿದೆ. ಪಿರ್ಯಾದಿ ಪೋಲಿಸರಿಗೆ ಮೂರನೇ ಆರೋಪಿಗೆ ದೋಷರೋಪಣೆಯ ನಕಲನ್ನು ಒದಗಿಸುವಂತೆ ಆದೇಶಿಸಲಾಗಿದೆ.

(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದನಂತರ ಅವರು ತಯಾರಿಸಿದ ಪ್ರತಿಯನ್ನು ಓದಿ, ತಿದ್ದಿ ತೆರೆದ ನ್ಯಾಯಾಲಯದಲ್ಲಿ ದಿಃ 12.08.2025 ರಂದು ಘೋಷಿಸಲಾಯಿತು. )

(ಕಾವ್ಯಶ್ರೀ ಎಂ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಕೊಳ್ಳೇಗಾಲ.

**(ತೆರೆದ ನ್ಯಾಯಾಲಯದಲ್ಲಿ ಪ್ರತ್ಯೇಕ ಆದೇಶವನ್ನು ಉದ್ಘೋಷಿಸಿಸಲಾಯಿತು.)**

**- ಆದೇಶ -**

ಅಭಿಯೋಜನೆಯು ಸಲ್ಲಿಸಿರುವ ದಂಡ ಪ್ರಕ್ರಿಯಾ ಸಂಹಿತೆ ಕಲಂ 319 ರಡಿಯಲ್ಲಿನ ಅರ್ಜಿಯನ್ನು ಈ ಮೂಲಕ ಪುರಸ್ಕರಿಸಲಾಗಿದೆ.

ಸದರಿ ಆದೇಶದಂತೆ ಪ್ರಸ್ತಾಪಿತ ಆರೋಪಿತಳನ್ನು ಈ ಪ್ರಕರಣದ 3ನೇ ಆರೋಪಿ ಎಂದು ಪರಿಗಣಿಸಲಾಗಿದೆ. ಹಾಗೂ ಸದರಿ 3ನೇ ಆರೋಪಿಯಾದ ಸತೀಶ್ ಬಿನ್ ಪ್ರಭುಸ್ವಾಮಿ ರವರಿಗೆ ನ್ಯಾಯಾಲಯದಿಂದ ಸಮನ್ಸ್ ಜಾರಿಮಾಡುವಂತೆ ಆದೇಶಿಸಲಾಗಿದೆ. ಪಿರ್ಯಾದಿ ಪೋಲಿಸರಿಗೆ ಮೂರನೇ ಆರೋಪಿಗೆ ದೋಷರೋಪಣೆಯ ನಕಲನ್ನು ಓದಗಿಸುವಂತೆ ಆದೇಶಿಸಲಾಗಿದೆ.

(ಕಾವ್ಯಶ್ರೀ ಎಂ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಕೊಳ್ಳೇಗಾಲ.